# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು

## ಸಿ ಸಿ ನಂಃ291/2018

## ಚಾಸಾ-1/ಪ್ರಾಸಾ-1

**ಪ್ರಮಾಣ ವಚನ ಭೋಧಿಸಲಾಯಿತು.** **ದಿನಾಂಕಃ26.11.2024.**

| | | |
|---|---|---|
| ಹೆಸರು | : | ಕೊಟ್ರಪ್ಪ ತಾಯಿ ದುರ್ಗಮ್ಮ |
| ವಯಸ್ಸು | : | 69 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಿಳಾಸ | : | ನಾಗರಕೊಂಡ ಗ್ರಾಮ, ಹರಪನಹಳ್ಳಿ ತಾಲೂಕು |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಆರೋಪಿ ನಂಃ1 ರಿಂದ 7 ನನಗೆ ಗೊತ್ತು. 6 ಮತ್ತು 7 ನೇ ಆರೋಪಿ ಮೃತರಾಗಿರುತ್ತಾರೆ. ಸಾಕ್ಷಿಯಾ ನ್ಯಾಯಾಲಯದಲ್ಲಿ ಹಾಜರು ಇದ್ದ ಆರೋಪಿ ನಂಃ1 ರಿಂದ 4 ನೋಡಿ ಗುರುತಿಸಿರುತ್ತಾರೆ. ಆರೋಪಿ ನಂಃ5 ಈ ಗೈರುಹಾಜರು ಇದ್ದು ಆರೋಪಿ ನಂಃ5 ಪರ ವಕೀಲರು ಆರೋಪಿಯ ಗುರುತಿಸುವಿಕೆಗೆ ಯಾವುದೇ ತಕರಾರು ಇಲ್ಲ ಎಂದು ಹೇಳಿರುತ್ತಾರೆ. ಚಾಸಾ2 ನನ್ನ ಮಗ. ಚಾಸಾ4 ನನ್ನ ತಂಗಿ. ಚಾಸಾ5 ನನ್ನ ಅಳಿಯ. ನಾನು 6-7 ವರ್ಷಗಳ ಹಿಂದೆ ಸರ್ವೆ ನಂಃ28, ಮಾಗಡಿ ಗ್ರಾಮಕ್ಕೆ ಸೇರಿದ ಜಮೀನನ್ನು ಹೊಲ ಉಳಲು ಚಾಸಾ2, 3, 7, 11 ರವರೊಂದಿಗೆ ಹೋಗಿರುತ್ತೇನೆ. ಆರೋಪಿ ನಂಃ1 ರಿಂದ 7 ರವರು ನಮ್ಮ ಹೊಲಕ್ಕೆ ಬಂದು ಸದರಿ ಜಮೀನು ನಮಗೆ ಸೇರಬೇಕು ಎಂದು ಹೇಳಿ ಗಲಾಟೆ ಮಾಡಿರುತ್ತಾರೆ. ನನಗೆ ಕಲ್ಲಿನಿಂದ ಆರೋಪಿ ನಂಃ1 ರವರು ಕೈಗೆ ಹೊಡೆದಿರುತ್ತಾರೆ. ಅದೇ ಕಲ್ಲಿನಿಂದ ಆರೋಪಿ ನಂಃ1 ರವರು ಚಾಸಾ2 ರವರ ಬಾಯಿಗೆ ಹೊಡೆದಿರುತ್ತಾರೆ. ಅದೇ ಕಲ್ಲಿನಿಂದ ಆರೋಪಿ ನಂಃ1 ರವರು ಚಾಸಾ4 ರವರಿಗೆ ಕೈಗೆ ಹೊಡೆದಿರುತ್ತಾರೆ. ನನಗೆ ಹೆದರಿಸಿ ಜೀವ ಬೆದರಿಕೆಯಾಕಿರುತ್ತಾರೆ. ನಂತರ ನಾನು ಪೋಲೀಸ್ ಠಾಣೆಯಲ್ಲಿ ದೂರನ್ನು ಕೊಟ್ಟಿರುತ್ತೇನೆ. ಸಾಕ್ಷಿಗೆ ಕಡತದಲ್ಲಿರುವ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಸದರಿ ದಾಖಲೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆಯು

ದೂರು ಆಗಿದ್ದು ಅದನ್ನು ನಿಪಿ 1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ 1 (ಎ) ಎಂದು ಗುರುತಿಸಲಾಯಿತು. ನಾನು ಜಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನಾನು ಈ ಬಗ್ಗೆ ಎಲ್ಲಿಯೂ ಸಹ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ದಿಃ20.06.2017 ರಂದು ಬೆಳಿಗ್ಗೆ 11.00 ಸಮಯಕ್ಕೆ ಆರೋಪಿತರು ನಾನು ಹೊಲದಲ್ಲಿ ಇದ್ದಾಗ ಅಕ್ರಮ ಗುಂಪು ಕಟ್ಟಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಆರೋಪಿಗಳು ನನ್ನನ್ನು ಉದ್ದೇಶಿಸಿ ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿ. ಆ ಸಮಯಕ್ಕೆ ನನಗೆ ಮತ್ತು ಚಾಸಾ2 ರಿಂದ 5 ರವರಿಗೆ ಕೈ ಕಾಲುಗಳಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. 2 ನೇ ಆರೋಪಿಯೂ ಕಲ್ಲನ್ನು ತೆಗೆದುಕೊಂಡು ಚಾಸಾ4 ರವರಿಗೆ ಎಡಮುಂಗೈಗೆ ಹೊಡೆದಿರುತ್ತಾರೆ ಎಂದರೆ ಸರಿ. ಅದೇ ರೀತಿ ಚಾಸಾ3 ರವರಿಗೆ 2 ನೇ ಆರೋಪಿಯೂ ಕಲ್ಲಿನಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ಜಗಳ ಬಿಡಿಸಲು ಬಂದ ಚಾಸಾ6 ರಿಂದ 11 ರವರಿಗೆ ಆರೋಪಿ ನಂಃ3 ರಿಂದ 5 ರವರು ಕಲ್ಲನ್ನು ತೂರಿರುತ್ತಾರೆ ಎಂದರೆ ಸರಿ. ಚಾಸಾ5 ರವರಿಗೆ ಎಡಹಿಮ್ಮಡಿಗೆ ತರಚಿದ ಗಾಯವಾಗಿದ್ದು ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿ. ಆರೋಪಿಗಳನ್ನು ಈ ಹಿಂದೆ ನಾನು ದಿಃ10.01.2018 ರಂದು ಠಾಣೆಯಲ್ಲಿ ಗುರುತು ಹಿಡಿದಿರುತ್ತೇನೆ ಎಂದರೆ ಸರಿ. ಈ ಬಗ್ಗೆ ನನ್ನ ಹೇಳಿಕೆಯನ್ನು ಪೋಲಿಸರಿಗೆ ನೀಡಿರುತ್ತೇನೆ ಎಂದರೆ ಸರಿ. ಆರೋಪಿತರು ನಮಗೆ ಹಲ್ಲೆ ಮಾಡಲು ಕಲ್ಲುಗಳನ್ನು ಮತ್ತೆ ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿ ಇದ್ದ 05 ಕಲ್ಲಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಒಟ್ಟಿಗೆ ಮುಮಾ1 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ-ಆರೋಪಿ ಪರ ಶ್ರೀ.ಹೆಚ್.ಬಿ., ವಕೀಲರಿಂದಃ

ನನ್ನ ಸ್ವಂತ ಊರು ನಾಗರಕೊಂಡ ಇರುತ್ತದೆ. ನಮ್ಮ ಊರಿಗೂ ಮತ್ತು ಘಟನಾ ಸ್ಥಳಕ್ಕೆ 01 ಕಿಮೀ ಅಂತರ ಇರುತ್ತದೆ. ಘಟನಾ ಸ್ಥಳಕ್ಕೂ ಮತ್ತು ಮಾಗಡಿ ಗ್ರಾಮಕ್ಕೆ 03 ಕಿಮೀ ಅಂತರ ಇದೆ. ಸರ್ವೇ

ನಂ:28 ರ ಒಟ್ಟು ವಿಸ್ತೀರ್ಣ 70-80 ಎಕರೆ ಇರುತ್ತದೆ. ನಾನು ಸರ್ವೆ ನಂ:28 ರಲ್ಲಿ ಉಳುಮೆ ಮಾಡುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ. ಚಾಸಾ2 ರಿಂದ 8 ರವರಿಗೆ ಸರ್ವೆ ನಂ:28 ರಲ್ಲಿ ಉಳುಮೆ ಮಾಡುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ. ನಮ್ಮ ಬಳಿ ಯಾವುದೇ ದಾಖಲೆ ಇಲ್ಲದೇ ಇದ್ದರೂ ಸಹ ನಾನು ಉಳುಮೆ ಮಾಡುತ್ತಿದ್ದಾಗಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿಪಿ1 ದೂರನ್ನು ಯಾವ ತಾರೀಕು, ಯಾವ ತಿಂಗಳು ಯಾವ ಇಸ್ವಿ ಯಲ್ಲಿ ನೀಡಿರುತ್ತೇನೆ ಎಂದರೆ ಗೊತ್ತಿಲ್ಲ. ನಾನು 7 ನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಇಂಗ್ಲಿಷ್ ಬಾಷೆ ಅರ್ಥ ಆಗುವುದಿಲ್ಲ. ನಿಪಿ1 ದೂರನ್ನು ನಾನೇ ಸ್ವತಃ ಕೈಯಲ್ಲಿ ಬರೆಯಲು ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ1 ಕೆಂಚಪ್ಪ ತಂದೆ ಗಂಗಪ್ಪ ಎಂಬುವವರು ಬರೆದಿರುತ್ತಾರೆ. ಸದರಿ ಕೆಂಚಪ್ಪ ತಂದೆ ಗಂಗಪ್ಪರವರು ಬರೆದು ಕೊಟ್ಟ ಪಿರ್ಯಾದಿ ನಿಪಿ1 ಇರುತ್ತದೆ ಎಂದರೆ ಸರಿ. ಘಟನೆ ನಡೆದಿದೆ ಎಂದು ಹೇಳುವ ಸಮಯ ಬೆಳಿಗೆ 10.00 ಗಂಟೆಯಾಗಿತ್ತು. ಆರೋಪಿಗಳು 11.00 ಗಂಟೆಗೆ ಬಂದಿರುತ್ತಾರೆ. ಆರೋಪಿಗಳು ನಾವು ಉಳುಮೆ ಮಾಡುತ್ತಿದ್ದ ಜಾಗಕ್ಕೆ ಉತ್ತರ ದಿಕ್ಕಿನಿಂದ ಬಂದಿರತ್ತಾರೆ. ಆರೋಪಿಗಳು 7-8 ಜನ ಬಂದಿರುತ್ತಾರೆ. ಆರೋಪಿ ನಂ:1, 3, 6 ರವರ ಕೈಗಳಲ್ಲಿ ಕಲ್ಲುಗಳು ಇದ್ದವು. ಅವುಗಳು ಎಷ್ಟು ಇದ್ದವು ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಯಾವ ಅವಾಚ್ಯ ಶಬ್ದಗಳಿಂದ ಆರೋಪಿಗಳು ನನ್ನನ್ನು ಬೈದಿರುತ್ತಾರೆ ಎಂದು ನಿಪಿ1 ರಲ್ಲಿ ತಿಳಿಸಿರುವುದಿಲ್ಲ. ಯಾವ ಆರೋಪಿಗಳು ಕಲ್ಲಿನಿಂದ ಹೊಡೆದರು ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ. ಸರ್ವೆ ನಂ:28 ರಲ್ಲಿ ಆರೋಪಿಗಳು ಸಹ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ಆರೋಪಿಗಳು ಉಳುಮೆ ಮಾಡುತ್ತಿದ್ದ ಜಮೀನನ್ನು ಉಳುಮೆ ಮಾಡಬೇಕು ಎಂದು ಹೋಗಿರುತ್ತೇವೆ ಎಂದರೆ ಸರಿಯಲ್ಲ. ನಾನು ಆರೋಪಿಗಳಿಂದ ಜಮೀನನ್ನು ಲಪಟಾಯಿಸಲು ನಿಪಿ1 ರಂತೆ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳು ನನ್ನ ಮೇಲೆ ಹಲ್ಲೆ ಮಾಡದೇ ಇದ್ದರೂ ಸಹ ನಾನು ಸುಳ್ಳು ದೂರು ನೀಡಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ2 ರಿಂದ 8 ರವರನ್ನು ನನ್ನ ಪಿರ್ಯಾದಿಗೆ ಅನುಗುಣವಾಗಿ ಅವರ ಹೇಳಿಕೆ ಕೊಡಿಸಿರುತ್ತೇನೆ ಎಂದರೆ

ಸರಿಯಲ್ಲ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಕೈ ಕಾಲುಗಳಿಂದ ಹೊಡೆದಿಲ್ಲ, ಜೀವ ಬೆದರಿಕೆಯಾಕಿರುವುದಿಲ್ಲ ಎಂದರೆ ಸರಿಯಲ್ಲ. ಮುಮಾ1 ಕಲ್ಲುಗಳು ಆರೋಪಿಗಳಿಗೆ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೊಲದಲ್ಲಿ ಕೆಲಸ ಮಾಡುವಾಗ ಸ್ವತಃ ಬಿದ್ದು ಸುಳ್ಳು ಗಾಯದ ಪ್ರಮಾಣ ಪತ್ರ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ನಾನು ಅವರ ವಿರುದ್ದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ.)**

**ಓ ಹೇ ಕೇ ಸರಿ ಇದೆ**

**ಸಹಿ**

**ಪ್ರ.ದ.ನ್ಯಾ.ದಂ., ಜಗಳೂರು**